**<u>ಸಾಕ್ಷಿಯನ್ನು ದಿಃ 24.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಒ ಎಸ್ 83/2021 3 ರಲ್ಲಿನ ನೇ ಪ್ರತಿವಾದಿ ಪರ ಶ್ರೀ ಎಂ ಎನ್ ಎಲ್ ವಕೀಲರಿಂದಃ-</u>**

ಒ.ಎಸ್. 83/2021 ದಾವೆಯಲ್ಲಿನ ವಾದ ಪತ್ರವನ್ನು ಬರೆಸಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾವೆ ಹಾಕಿರುವ ಮಾಹಿತಿ ಎಲ್ಲಾ ಸರಿ ಇರುತ್ತದೆ. ದಾವಾ ಸ್ವತ್ತಿನ ವಿವರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಐಟಂ ನಂ.1 ರಲ್ಲಿ ಸರ್ವೆ ನಂ.234/1 ಎ 2 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ ಸರ್ವೆ ನಂ. ಹೇಳಲು ಗೊತ್ತಾಗುತ್ತಿಲ್ಲ. ಸದರಿ ಸರ್ವೆ ನಂ. ವಿಸ್ತೀರ್ಣ ಎಷ್ಟಿದೆ ಎಂದು ಹೇಳಲು ಆಗುವುದಿಲ್ಲ. ಸದರಿ ಸರ್ವೆ ನಂ. ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ರ ಸ್ವತ್ತು ಯಾವುದೆಂದು ಹೇಳಲು ಆಗುವುದಿಲ್ಲ. ಅದೇ ರೀತಿ ದಾವಾ ಐಟಂ ನಂ.3 ಸ್ವತ್ತು ಯಾವುದೆಂದು ಹೇಳಲು ಆಗುವುದಿಲ್ಲ.

ನಿ ಡಿ -24 ರಲ್ಲಿ ನಮೂದಿಸಿರುವ ಪಾರ್ವತಮ್ಮ ಎಂಬುವವರು ನನ್ನ ತಾಯಿ. ಅವರು ಯಾವ ದಿನಾಂಕದಂದು ಅರ್ಜಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅರ್ಜಿ ಕೊಟ್ಟಿರುವುದೇ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಣ್ಣನ ಮಗ ಅಂದರೆ 3 ನೇ ಪ್ರತಿವಾದಿ ಮೋಸ ಮಾಡಿ ಬರೆಯಿಸಿ ಕೊಂಡಿದ್ದಾನೆಂದು ತಾಯಿ ಅರ್ಜಿ ಕೊಟ್ಟಿದ್ದರು. ಸದರಿ ಅರ್ಜಿಯಲ್ಲಿ ದಾವಾ ಐಟಂ ನಂ.1 ಮತ್ತು 2 ರ ಸ್ವತ್ತು ಸ್ವಯಾರ್ಜಿತ ಸ್ವತ್ತು ಎಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯನ್ನು 23.12.2020 ರಂದು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿ ಪಾರ್ವತಮ್ಮ ಯಾವಾಗ ಮರಣ ಹೊಂದಿದರು ಎಂದರೆ ನನಗೆ ಸರಿಯಾಗಿ ದಿನಾಂಕ ಗೊತ್ತಿಲ್ಲ. ಅವರು ಮರಣ ಹೊಂದಿ ಸುಮಾರು 5-6 ವರ್ಷಗಳಾಗಿರುತ್ತದೆ. ನಿ ಡಿ -24 ಅರ್ಜಿಯ ಬಗ್ಗೆ ಇತ್ಯಾರ್ಥ ಆಗುವ ಮೊದಲೇ ಅವರು ತೀರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ವಾದ ಪತ್ರದಲ್ಲಿ ಹೇಳಿರುವಂತೆ ಮೊದಲೇ ವಿಭಾಗ ಪತ್ರ ಆಗಿತ್ತು ಎಂಬ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಮತ್ತು ನನ್ನ ತಾಯಿಯವರು ಯಾವಾಗ ವಿಭಾಗ ಪತ್ರ ಮಾಡಿರುವುದು ನನಗೆ ಗೊತ್ತಿಲ್ಲ. ಹಾಗೇ ವಿಭಾಗ ಪತ್ರ ಮಾಡಿಕೊಳ್ಳುವ ಕಾಲಕ್ಕೆ ಸಮನಾದ ಹಕ್ಕು ಇತ್ತು ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ ಗೊತ್ತಿಲ್ಲದ ಹಾಗೇ ದಿನಾಂಕಃ 24.06.2020 ರಂದು ಆಧಾರ್ ಕಾರ್ಡ್ ತಿದ್ದುಪಡಿ ಮಾಡಿಸಲು ತಾಯಿಯನ್ನು ಕರೆದುಕೊಂಡು ಹೋಗಿ ವಿಭಾಗ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದು ಸಾಕ್ಷಿ ಪುನಃ ಒಂದು ಆಸ್ತಿ ಬಿಟ್ಟು ಹೋಗಿತ್ತು ಎಂದು ಹಾಗೇ ಮಾಡಿಕೊಟ್ಟಿದ್ದಾರೆ. ದಿನಾಂಕಃ 24.06.2020 ರಂದು ನಾನು ಮತ್ತು ತಾಯಿ ಮಾಡಿಕೊಂಡಂತಹ ವಿಭಾಗ ಪತ್ರದ ಆಸ್ತಿಗಳು ಎಲ್ಲವೂ ಪಿತ್ರಾರ್ಜಿತ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ಒ ಎಸ್ ನಂ.127/2020 ದಾವೆಯನ್ನು ದಿನಾಂಕಃ 12.11.2020 ರಂದು ಸೋಮಪ್ಪ ಎಂಬುವವರು ನನ್ನ ಮತ್ತು ನನ್ನ ತಾಯಿಯ ಮೇಲೆ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆ ಹಾಕಿದ ನಂತರ ಒ ಎಸ್ ನಂ.83/2021 ದಾವೆ ಹಾಕಿದ್ದೇವೆ ಎಂದರೆ ಸರಿ. 3 ನೇ ಪ್ರತಿವಾದಿಯು ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ಒ ಎಸ್ ನಂ.83/2021 ರಲ್ಲಿನ ಐಟಂ ನಂ.1 ಮತ್ತು 2 ರ ಸ್ವತ್ತು ತಾಯಿಯ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ತಾಯಿ ಪಾರ್ವತಮ್ಮ ರವರಿಗೆ ಅರಿಶಿನ ಕುಂಕುಮಕ್ಕೆಂದು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ತಂದೆಯೇ ಅವರ ಹೆಸರಿಗೆ ಖರೀದಿಸಿ ಕೊಟ್ಟಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ದಿನಾಂಕಃ 07.08.2021 ರಂದು ಒ ಎಸ್ ನಂ.127/2020 ರ ದಾವೆಯಲ್ಲಿ ಸಲ್ಲಿಸಿದ ರಾಜೀ ಅರ್ಜಿಯಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ಒ ಎಸ್ ನಂ.83/2021 ರ ದಾವೆಯಲ್ಲಿ ನಿ ಡಿ –1 ಎಂದು ಗುರುತಿಸಲಾಯಿತು. ಸದರಿ ರಾಜೀ ಅರ್ಜಿಯಲ್ಲಿ ಬರೆದಿರುವ ಮಾಹಿತಿ ನನಗೆ ಗೊತ್ತಿರುತ್ತದೆ. ಒ ಎಸ್ ನಂ.127/2020 ರಲ್ಲಿನ ದಾವಾ ಸ್ವತ್ತುಗಳನ್ನು

ಹೊರತುಪಡಿಸಿ ರಾಜೀ ಮಾಡಿಕೊಳ್ಳಲಾಗಿತ್ತು ಎಂದರೆ ಸರಿ. ಸಾಕ್ಷಿ ಪುನಃ ಎಲ್ಲಾ ಆಸ್ತಿಗಳನ್ನು ಸೇರಿಸಿ ರಾಜೀ ಮಾಡಿಕೊಳ್ಳಲಾಗಿತ್ತು ಆದರೆ ಅದು ಪೂರ್ಣ ಗೊಂಡಿರಲಿಲ್ಲ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದರು ಮುಂದೂಡಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.